ಕ್ರ.ಸಂ. 53_ 149  th

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ**

## ವಿಷಯ

ದಿನಾಂಕ: 20-2-2023 ರ ಉದಯವಾಣಿ ಪತ್ರಿಕೆಯಲ್ಲಿ ಮಕ್ಕಳಿಗೆ ಮೊಬೈಲ್ ಚಟ-ಚಿಣ್ಣರಿಗೆ ಸ್ಮಾರ್ಟ್ ಫೋನ್ ಗೀಳು, ಭವಿಷ್ಯವೇ ಹಾಳು ವಿವಿಧ ಆರೋಗ್ಯ, ಸಮಸ್ಯೆಗೆ ಕಾರಣವಾಗುತ್ತಿದೆ. ಈ ಚಟ ಎಂದು ಮುಖಪುಟದಲ್ಲಿ ವರದಿಯಾಗಿರುವ ಬಗ್ಗೆ.

ಕೋವಿಡ್ ಲಾಕ್ ಡೌನ್ ವೇಳೆ ಕಲಿಕೆಗಾಗಿ ಮಕ್ಕಳ ಕೈಗೆ ಕೊಟ್ಟ ಮೊಬೈಲ್ ಈಗ ಗೀಳಾಗಿ ಅಂಟಿದ್ದು, ಶೇಕಡ 36 ರಷ್ಟು ಮಕ್ಕಳು ರಾಜ್ಯದಲ್ಲಿ ಮೊಬೈಲ್ ಚಟಕ್ಕೆ, ದಾಸರಾಗಿರುವುದಾಗಿ ಅಮೆರಿಕನ್ ಅಕಾಡೆಮಿ ಪೀಡಿಯಾಟ್ರಿಕ್ (ಎಎಪಿ) ಸಮೀಕ್ಷೆ ತಿಳಿಸಿದ. ಅದರಂತೆ, 5 ವರ್ಷಕ್ಕಿಂತ ಕೆಳಗಿನವರಿಗೆ ಮೊಬೈಲ್ ಸ್ಕ್ರೀನ್ ತೋರಿಸಬಾರದು, 5-7 ವರ್ಷದವರು ದಿನಕ್ಕೆ 1 ಗಂಟೆ ಮೊಬೈಲ್ ವೀಕ್ಷಿಸಬಹುದು, 7-12 ವರ್ಷದ ಮಕ್ಕಳು 2 ಗಂಟೆ ಮೊಬೈಲ್, ಲ್ಯಾಪ್ ಟಾಪ್, ಟಿವಿ ವೀಕ್ಷಿಸಬಹುದಾಗಿದ್ದು, ಹೆಚ್ಚು ನೋಡಿದರೆ ಆರೋಗ್ಯದ ಮೇಲೆ ಪರಿಣಾಮಬೀರುವ ಸಾಧ್ಯತೆಯೇ ಹೆಚ್ಚಾಗಿರುವುದಾಗಿ ವರದಿಯಲ್ಲಿದೆ.

ಸ್ಮಾರ್ಟ್ ಫೋನ್ ಬಳಕೆ ಅತಿಯಾದ ಕಾರಣ ಶೇ.18 ರಷ್ಟು ಮಕ್ಕಳಲ್ಲಿ ಖಿನ್ನತೆ, ನಿದ್ರಾಹೀನತೆ, ಕಿರಿಕಿರಿ, ಏಕಾಗ್ರತೆ ಕೊರತೆ, ದೈಹಿಕ ಸಮಸ್ಯೆ, ಬೊಜ್ಜು, ದೃಷ್ಟಿ ಸಮಸ್ಯೆ, ನೆನಪಿನ ಶಕ್ತಿ ಕ್ಷೀಣಿಸುವುದು, ನರದೌರ್ಬಲ್ಯದಂತಹ ವಿವಿಧ ರೀತಿಯ ಖಾಯಿಲೆಗಳಿಗೆ ತುತ್ತಾಗುತ್ತಿರುವುದು ಪೋಷಕರ ಆತಂಕಕ್ಕೆ ಕಾರಣವಾಗಿದೆ. ಮೊಬೈಲ್ ನಲ್ಲಿ ವಿವಿಧ ವೆಬ್ ಸೈಟ್ ಗಳಲ್ಲಿ ಅಶ್ಲೀಲ ವಿಡಿಯೋ ವೀಕ್ಷಿಸುವವರು ಹೆಚ್ಚಾಗಿದ್ದು, 13 ರಿಂದ 19 ವರ್ಷದ ಶೇ. 35 ರಷ್ಟು ಮಕ್ಕಳು ಅಶ್ಲೀಲ ಚಿತ್ರ ವೀಕ್ಷಿಸುವ ವ್ಯಸನಿಗಳ ಪೈಕಿ ಶೇ.98 ಬಾಲಕರಿದ್ದರೆ, ಶೇ. 0.50 ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ಬಾಲಕಿಯರಿದ್ದಾರೆ. ಇದು ಮಕ್ಕಳಲ್ಲಿ ಲೈಂಗಿಕ ದೌರ್ಜನ್ಯ ಕೃತ್ಯವೆಸಗಲು ಕಾರಣವಾಗುತ್ತಿರುವುದಾಗಿ ತಿಳಿದು ಬಂದಿರುತ್ತದೆ.

ಆದುದರಿಂದ, ಮಕ್ಕಳಲ್ಲಿ ವಿವಿಧ ರೀತಿಯ ಖಾಯಿಲೆಗಳು ಮತ್ತು ಸಮಾಜದಲ್ಲಿ ಆತಂಕಕಾರಿ ಕೃತ್ಯಗಳ ಮನೋಭಾವನೆಯನ್ನು ಹೊಗಲಾಡಿಸುವ ಸಲುವಾಗಿ ಶಿಕ್ಷಣ ಇಲಾಖೆಯೂ ತಕ್ಷಣ ಎಚ್ಚೆತ್ತು ಪ್ರತಿಯೊಂದು ಶಾಲೆಗಳಲ್ಲಿ ಮಕ್ಕಳು ಮತ್ತು ಪೋಷಕರ ಜಂಟಿ ಸಭೆಯನ್ನು ಶಿಕ್ಷಕರೊಂದಿಗೆ ನಡೆಸಿ ಮಕ್ಕಳಲ್ಲಿ ಅರಿವನ್ನು ಉಂಟುಮಾಡುವ ಮೂಲಕ ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸ ಬೇಕೆನ್ನುವ ಬಗ್ಗೆ.

## ಉತ್ತರ

ನಿರ್ದಿಷ್ಟ ಮಕ್ಕಳನ್ನು ವ್ಯಸನಿ ಎಂದು ತೀರ್ಮಾನಿಸುವುದರ ಕುರಿತು ಮಾನಸಿಕ ತಜ್ಞರು ಕ್ರಮವಹಿಸುವುದು ಅವಶ್ಯಕತೆ ಇರುತ್ತದೆ. ಈ ಕುರಿತು ಶಿಕ್ಷಕರು ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿಲ್ಲ. ಪೋಷಕರು ಮಾತ್ರ ತಮ್ಮ ಮಕ್ಕಳು ಸ್ಮಾರ್ಟ್‌ಫೋನ್ ಬಳಸುವುದನ್ನು ತಡೆಗಟ್ಟಬಹುದಾಗಿದೆ.

ಮಕ್ಕಳಲ್ಲಿ ವಿವಿಧ ರೀತಿಯ ಕಾಯಿಲೆಗಳು ಮತ್ತು ಅತಂಕಕಾರಿ ಕೃತ್ಯಗಳ ಮನೋಭಾವನೆಯನ್ನು ಹೋಗಲಾಡಿಸುವ ಸಲುವಾಗಿ ಆರೋಗ್ಯ ಇಲಾಖೆಯೊಂದಿಗೆ ಸಮಾಲೋಚಿಸಿ ಸೂಕ್ತ ಕಾರ್ಯತಂತ್ರ ರೂಪಿಸುವ ಅವಶ್ಯಕತೆ ಇರುತ್ತದೆ.

ಒಟ್ಟಾರೆಯಾಗಿ ರಾಜ್ಯದಲ್ಲಿ ಶಾಲಾ ವಿಧ್ಯಾರ್ಥಿಗಳು ಮೊಬೈಲ್ ಅನ್ನು ಹೆಚ್ಚು ಬಳಸುತ್ತಿರುವುದರಿಂದ ದುಷ್ಪರಿಣಾಮಗಳು ಉಂಟಾಗಿರುವ ಬಗ್ಗೆ ಆರೋಗ್ಯ ಇಲಾಖೆಯ ತಜ್ಞರ ಅಭಿಪ್ರಾಯವನ್ನು ಪಡೆದು ತೀರ್ಮಾನಿಸಬೇಕಾಗಿರುತ್ತದೆ.

**ಸಂಖ್ಯೆ:ಇಪಿ 81 ಪಿಜಿಸಿ 2023**

**(ಬಿ.ಸಿ. ನಾಗೇಶ್)**
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು